ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬುದ್ಧಿಮಾಂದ್ಯ/ಅಂಗವಿಕಲ ಮಕ್ಕಳನ್ನು ನೋಡಿಕೊಳ್ಳಲು ರಾಜ್ಯ ಸರ್ಕಾರಿ ಮಹಿಳಾ ನೌಕರರಿಗೆ 'ಶಿಶುಪಾಲನಾ ರಜೆ' ಮಂಜೂರು ಮಾಡುವ ಬಗ್ಗೆ.

******

ಪ್ರಸ್ತಾವನೆ:-

ನ್ಯೂನ್ಯತೆಯುಳ್ಳ ವಿಶೇಷ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆಯಿದ್ದು, ಆಗಿಂದಾಗ್ಗೆ ವಿವಿಧ ರೋಗಗಳಿಗೆ ತುತ್ತಾಗುವುದರಿಂದ ಅಂತಹ ಮಕ್ಕಳ ಆರೈಕೆಗಾಗಿ ಹಾಗೂ ಅಂಥ ಮಗುವಿನ ನಡವಳಿಕೆಯನ್ನು ತಿದ್ದಿ ಉತ್ತಮಪಡಿಸಲು,ಮಗುವಿನಲ್ಲಿ ಮನೋಸ್ಥೈರ್ಯವನ್ನು ತುಂಬಲು ಅಲ್ಲದೆ, ಪುನರ್ವಸತಿಗಾಗಿ ಹಾಗೂ ಕಲಿಕೆಯ ನೈಪುಣ್ಯತೆಗಾಗಿ ತಾಯಿಂದಿರ ಪೋಷಕ ಅವಶ್ಯಕತೆ ಬಹಳವಿದ್ದು, ಅಂತಹ ವಿಶೇಷ ಮಕ್ಕಳನ್ನು ನೋಡಿಕೊಳ್ಳಲು ಇತರರಿಗೆ ಕಷ್ಟಸಾಧ್ಯವಾಗಿರುತ್ತದೆ ಮತ್ತು ಅನಾರೋಗ್ಯದ ಸಮಸ್ಯೆಯಿಂದ ಅವರನ್ನು ಬೇರೆಲ್ಲೂ ಬಿಡಲು ಸಾಧ್ಯವಾಗುವುದಿಲ್ಲ. ಈ ಹಿನ್ನಲೆಯಲ್ಲಿ ರಾಜ್ಯ ಸರ್ಕಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಸರ್ಕಾರಿ ನೌಕರರಿಗೆ , ತಮ್ಮ ಅಂಗವಿಕಲ/ಬುದ್ಧಿಮಾಂದ್ಯ ಇಂತಹ ವಿಶೇಷ ಮಕ್ಕಳ ಪಾಲನೆಗಾಗಿ 'ಶಿಶು ಪಾಲನಾ ರಜೆ' ಸೌಲಭ್ಯವನ್ನು ನೀಡಲು ಸರ್ಕಾರವು ನಿರ್ಧರಿಸಿ, ಈ ಕೆಳ ಕಂಡಂತೆ ಆದೇಶ ಹೊರಡಿಸಲು ಹರ್ಷಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ:ಆಇ 1 ಸೇನಿಸೇ 2011, ಬೆಂಗಳೂರು,
ದಿನಾಂಕ: 29.6.2011

The Person with Disabilities (Equal Opportunities, Protection of Rights and Full Partipitation) ACT, 1995 ಮತ್ತು The National Trust for Welfare of persons with Autism, Cerebral Palsy, Mental retardation, Multiple disabilities ACT,1999 ಗಳಡಿಯಲ್ಲಿ ಸೂಚಿತವಾಗಿರುವ Autism, Blindness,Mental Illness ,Cerebral Palsy,Mental retardation & Multiple disabilities ಉಳ್ಳ ವಿಶೇಷ ಮಕ್ಕಳನ್ನು ನೋಡಿಕೊಳ್ಳಲು ಅವರ ತಾಯಿಗೆ ಮಾತ್ರ

(ಮಹಿಳಾ ಸರ್ಕಾರಿ ನೌಕರರಿಗೆ) ವೈದ್ಯಕೀಯ ಮಂಡಳಿಯ ಪ್ರಮಾಣ ಪತ್ರದ ಆಧಾರದ ಈ ಕೆಳಕಂಡ ಷರತ್ತುಗಳ ಮೇರೆಗೆ ಒಂದು ವರ್ಷದಲ್ಲಿ ಮೂರು ಕಂತುಗಳಿಗೆ ಮೀರದಂತೆ ಹಾಗೂ 15 ದಿನಗಳಿಗೆ ಕಡಿಮೆ ಇಲ್ಲದಂತೆ ಇಡೀ ಸೇವಾವಧಿಯಲ್ಲಿ ಎರಡು ವರ್ಷಗಳ ಅವಧಿಗೆ ಅಂದರೆ ಒಟ್ಟು 730 ದಿನಗಳ 'ಶಿಶುಪಾಲನಾ ರಜೆ' ಯನ್ನು ,ರಜೆಯನ್ನು ಮಂಜೂರು ಮಾಡುವ ಸಕ್ಷಮವಾದ ಪ್ರಾಧಿಕಾರವು ಮಂಜೂರು ಮಾಡತಕ್ಕದ್ದು.

i) ಯಾವ ಮಹಿಳಾ ಸರ್ಕಾರಿ ನೌಕರಳು, ಮೇಲ್ಕಂಡ ಆಕ್ಟ್‌ಗಳಡಿಯಲ್ಲಿ ರುವ ಅಂಗವಿಕಲ/ಬುದ್ಧಿಮಾಂದ್ಯ ವಿಶೇಷ ಮಕ್ಕಳನ್ನು ಹೊಂದಿದ್ದು, ಇಂಥ ಮಕ್ಕಳ ಆರೈಕೆಗಾಗಿ ಹಾಗೂ ಅಂಥ ಮಗುವಿನ ನಡವಳಿಕೆಯನ್ನು ತಿದ್ದಿ ಉತ್ತಮಪಡಿಸಲು,ಮಗುವಿನಲ್ಲಿ ಮನೋಸ್ಥೈರ್ಯವನ್ನು ತುಂಬಲು ಅಲ್ಲದೆ, ಪುನರ್ವಸತಿಗಾಗಿ ಹಾಗೂ ಕಲಿಕೆಯ ನೈಪುಣ್ಯತೆಗಾಗಿ ತಾಯಿಂದಿರ ಪೋಷಣೆ ಇಡೀ ಅವಳ ಸೇವಾವಧಿಯಲ್ಲಿ ಎರಡು ವರ್ಷಗಳ ಅವಧಿಗೆ ಅಂದರೆ ಒಟ್ಟು 730 ದಿನಗಳು ಮೀರದಂತೆ, ವೈದ್ಯಕೀಯ ಪತ್ರದ ಆಧಾರದ ಮೇಲೆ 'ಶಿಶುಪಾಲನಾ ರಜೆ'ಯನ್ನು ಮಂಜೂರು ಮಾಡತಕ್ಕದ್ದು.

ii) ಮಹಿಳಾ ನೌಕರರು ತಮ್ಮ ಎರಡು ಜೀವಂತ ಮಕ್ಕಳಿಗೆ ಮಾತ್ರ ಇಂಥ ರಜೆಯ ಕೋರಿಕೆಯನ್ನು ಸಲ್ಲಿಸಬಹುದು ಮತ್ತು ಆ ಮಕ್ಕಳಿಗೆ 18 ವರ್ಷ ಮೀರಿರಬಾರದು.

iii) ಇಂಥ ರಜೆಯ ಅವಧಿಯಲ್ಲಿ ಅವಳಿಗೆ, ಅವಳ ರಜೆಯ ಮೇಲೆ ಹೋಗುವ ನಿಕಟ ಪೂರ್ವದಲ್ಲಿ ಆಕೆ ಪಡೆಯುತ್ತಿದ್ದ ವೇತನಕ್ಕೆ ಸಮನಾದ ರಜಾ ವೇತನವನ್ನು ನೀಡತಕ್ಕದ್ದು.

iv) ಇಂಥ ರಜೆಯನ್ನು ಗಳಿಕೆ ರಜೆಯ ಲೆಕ್ಕಕ್ಕೆ ಸೇರಿಸಲು ಅವಕಾಶವಿಲ್ಲ, ಇಂಥ ರಜೆಯನ್ನು ಪಡೆಯಲು ಅರ್ಜಿದಾರರಿಗೆ ನಿಯಮಾನುಸಾರ ಲಭ್ಯವಿರುವ ಯಾವುದೇ ರಜೆಯ ಜೊತೆಗೆ ಸಂಯೋಜಿಸ ಬಹುದಾಗಿದೆ ಹಾಗೂ ಎರಡು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ರಜೆಯ ಅವಶ್ಯವಿದ್ದಲ್ಲಿ ಅಸಾಧಾರಣ ರಜೆಯನ್ನು ಸಹ ಮಂಜೂರು ಮಾಡಬಹುದಾಗಿದೆ.

v) ಇಂಥ ರಜೆಯು ಒಂದು ಕ್ಯಾಲೆಂಡರ್ ವರ್ಷದಲ್ಲಿ ಮೂರು ಬಾರಿಗಿಂತ ಮೀರಬಾರದು ಮತ್ತು ಇಂಥ ರಜೆಯು ಪ್ರತಿ ಬಾರಿ 15 ದಿನಗಳಿಗಿಂತ ಕಡಿಮೆ ಇರಬಾರದು.

vi) ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ, ಪರಿವೀಕ್ಷಣಾವಧಿ ಅವಧಿಯಲ್ಲಿನ ಮಹಿಳಾ ನೌಕರರಿಗೆ ಇಂಥಹ ರಜೆಯನ್ನು ಮಂಜೂರು ಮಾಡತಕ್ಕದ್ದಲ್ಲ.

vii) ಪ್ರತಿಯೊಂದು ಇಂಥಹ ರಜೆಯ ಅವಧಿಯ ಮಂಜೂರಾತಿಗೆ ಅಂಗವಿಕಲ/ಬುದ್ಧಿಮಾಂದ್ಯ ಬಳಲುತ್ತಿರುವ ಬಗ್ಗೆ ಮಹಿಳಾ ಸರ್ಕಾರಿ ನೌಕರರು ಜಿಲ್ಲಾ ಆರೋಗ್ಯ ವೈದ್ಯಾಧಿಕಾರಿಗಳು/ ಜಿಲ್ಲಾ ವೈದ್ಯಕೀಯ ಮಂಡಳಿ ನೀಡುವ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

viii) ಈ ರಜೆಯನ್ನು ಮಂಜೂರು ಮಾಡುವ ಸಕ್ಷಮವಾದ ಪ್ರಾಧಿಕಾರವು ಶಿಶುಪಾಲನಾ ರಜೆಯ ಮಂಜೂರಾತಿಯನ್ನು ಸೇವಾ ಪುಸ್ತಕದಲ್ಲಿ ದಾಖಲು ಮಾಡುವುದು ಮತ್ತು ನಿಗದಿತ ನಮೂನೆಯಲ್ಲಿ ಲೆಕ್ಕವಿಡಬೇಕು. ನಿಗದಿತ ನಮೂನೆಯನ್ನು ಈ ಆದೇಶಕ್ಕೆ ಲಗತ್ತಿಸಲಾಗಿದೆ.

ಈ ಬಗ್ಗೆ ಕ.ನಾ.ಸೇ.ನಿಯಮಾವಳಿಗಳಿಗೆ ಪ್ರತ್ಯೇಕವಾಗಿ ಸೂಕ್ತ ತಿದ್ದುಪಡಿ ತರಲಾಗುವುದು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪಿ.ನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು-1).

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 100 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

<u>ಇವರಿಗೆ:</u>

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳಿಗೆ.
2. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು/ವಿಶೇಷ ಕಾರ್ಯದರ್ಶಿಗಳು ಅಪರ ಕಾರ್ಯದರ್ಶಿಗಳು/ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳಿಗೆ ಹಾಗೂ ಅಧೀನ ಕಾರ್ಯದರ್ಶಿಗಳಿಗೆ.
3. ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.

5 ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.

6 ಮಹಾಲೇಖಪಾಲರು (ಲೆಕ್ಕಪತ್ರ:ಲೆಕ್ಕ ಪರಿಶೋಧನೆ: ಜಿ.ಎಂ.ಶಾಖೆ),ಕರ್ನಾಟಕ, ಬೆಂಗಳೂರು.

7. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು.

8. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು.

9. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

10.ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.

11.ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತು, ಬೆಂಗಳೂರು.

12.ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು.

13.ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ , ವಿಕಾಸ ಸೌಧ, ಬೆಂಗಳೂರು ( 10 ಪ್ರತಿಗಳೊಂದಿಗೆ)

14.ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

15.ಅಧ್ಯಕ್ಷರು,ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು

16.ಅಧ್ಯಕ್ಷರು,ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ, ಬೆಂಗಳೂರು.

17.ಕರ್ನಾಟಕ ಸರ್ಕಾರಿ ಸಚಿವಾಲಯದ ಎಲ್ಲಾ ಶಾಖೆಗಳು.

18.ಕರ್ನಾಟಕ ಸರ್ಕಾರಿ ಸಚಿವಾಲಯ ಗ್ರಂಥಾಲಯ; ವಿಧಾನ ಮಂಡಲ ಗ್ರಂಥಾಲಯ

19.ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ (ಎಲ್ಲಾ ಜಿಲ್ಲಾ ಖಜಾನೆಗಳು).

20.ಖಾರಪತ್ರ.

[ಕ್ರಮ ಸಂಖ್ಯೆ:7 ರಿಂದ 13 ರವರೆಗೆ ನಮೂದಿತವಾದ ಅಧಿಕಾರಿಗಳಿಗೆ ಪತ್ರದ ಮೂಲಕ].

ಕರ್ನಾಟಕ ಸರ್ಕಾರದ ಅಧಿಕೃತ ಅಂತರ್ಜಾಲ ತಾಣ www.finance.kar.nic.in ವೀಕ್ಷಿಸಿ.

GBII29062011

## ವಿಶೇಷ ಮಕ್ಕಳ 'ಶಿಶುಪಾಲನಾ ರಜೆ'ಯ ಲೆಕ್ಕವನ್ನಿಡಲು ಪ್ರಪತ್ರ

(ದಿ: 29-6-2011ರ ಆಇ 1 ಸೇನಿಸೇ 2011ರ ಆದೇಶಕ್ಕೆ ಅನುಬಂಧ)

| ಕ್ರಮ ಸಂಖ್ಯೆ Sl.No | ತೆಗೆದುಕೊಂಡ ಶಿಶುಪಾಲನಾ ರಜೆಯ ಅವಧಿ Period of Leave taken for child caring | | ಬಾಕಿ ಉಳಿದಿರುವ ಶಿಶುಪಾಲನಾ ರಜೆ Balance of Child Caring Leave | | ರಜೆ ಮಂಜೂರು ಮಾಡಿರುವ ಸಕ್ಷಮ ಪ್ರಾಧಿಕಾರಿಯ ಸಹಿ ಮತ್ತು ಮೊಹರು Sign and seal of concerned officer |
|---|---|---|---|---|---|
| | ಯಿಂದ From | ಇಲ್ಲಿಯವರೆಗೆ To | ಬಾಕಿ Balance | ದಿನಾಂಕ Date | |
| 1 | | | | | |
| 2 | | | | | |
| 3 | | | | | |
| 4 | | | | | |
| 5 | | | | | |
| 6 | | | | | |

ಪಿ. ನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು-1)